(ಇಂದು ದಿನಾಂಕಃ 29-06-2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ವಾದಿ ಪರಃ ಶ್ರೀ ಡಿ.ಎನ್.ಜಿ. ವಕೀಲರಿಂದಃ**

ನನಗೆ ಇಂಗ್ಲಿಷ್ ಓದಲು ಬರೆಯಲು ಬರುತ್ತದೆ. ಈ ಕೇಸಿಗೆ ಸಂಬಂಧಪಟ್ಟ ಆಸ್ತಿ ಮೂಲತಃ ಮೊಹಮ್ಮದ್ ಶೇಖ್ ಹಸನ್ ಇವರಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ಹಿಂದೆ ನಡೆದ ಮೂ.ದಾ. ನಂ. 70/1979 ರಲ್ಲಿ ಮೊಹಮ್ಮದ್ ಶೇಖ್ ಹಸನ್ ಇವರ ವಾರಸುದಾರರು ವಾರಿಸಾನಾತೆಯಲ್ಲಿ ದಾವಾ ಸ್ವತ್ತಿನಲ್ಲಿ ಹಕ್ಕನ್ನು ಕೇಳಿ ದಾವೆ ಹಾಕಿದ್ದರು ಎಂದರೆ ಸರಿ. ಶೇಖ್ ಉಮರ ಹಸನ್ ಮೂ.ದಾ. ನಂ. 70/1979 ರಲ್ಲಿ ಪ್ರತಿವಾದಿ ನಂ. 6 ಆಗಿದ್ದರು ಎಂದರೆ ಸರಿ. ಆ ದಾವೆಯಲ್ಲಿ ಪ್ರತಿವಾದಿ ನಂ. 6 ಕೌಂಟರ್ ಕ್ಲೇಮ್ ಸಲ್ಲಿಸಿ ಅದರಲ್ಲಿ ಮನೆ ನಂ. 507 ಇದರ ಸ್ವಾಧೀನತೆಯನ್ನು ಅವರಿಗೆ ಕೊಡಿಸಲು ಹಾಗೂ ಕೊಡುವ ತನಕ ನಷ್ಟ ಪರಿಹಾರ ಕೊಡಬೇಕು ಎಂದು ಕೇಳಿಕೊಂಡಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಹಿಂದೆ ನಡೆದ ಮೂ.ದಾ. ನಂ. 70/1979 ರ ಎಲ್ಲಾ ದಾಖಲಾತಿಗಳನ್ನು ನಾನು ಪಡೆದಿದ್ದೇನೆ ಎಂಬ ಪ್ರಶ್ನೆಗೆ ಸಾಕ್ಷಿ ಅದರ ತೀರ್ಪು ಮತ್ತು ಡಿಕ್ರಿ ಪ್ರತಿ ಪಡೆದಿದ್ದೇನೆ ಎನ್ನುವರು. ಶೇಖ್ ಉಮರ ಹಸನ್‌ರವರು ಆ ದಾವೆಯಲ್ಲಿ ಹಾಕಿದ ಕೌಂಟರ್ ಕ್ಲೇಮ್ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ

ಅದನ್ನು ಮುಚ್ಚಿಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ಕೌಂಟರ್ ಕ್ಲೇಮನ್ನು ಹಾಜರುಪಡಿಸಿದ್ದು ಅದನ್ನು ನಿ.ಡಿ. 8 ಎಂದು ಗುರುತಿಸಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದು ಪ್ರತಿವಾದ ಪತ್ರ ಹಾಗೂ ಕೌಂಟರ್ ಕ್ಲೇಮ ಆಗಿರುತ್ತದೆ ಎನ್ನುವರು. ಶೇಖ್ ಉಮರ ಹಸನ್‌ರವರು ದಿನಾಂಕಃ 07-02-1978 ರಲ್ಲಿ ನೊಂದಾಯಿತ ಕ್ರಯದಸ್ತಾವೇಜು ಮೂಲಕ ದಾವಾಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಆ ಕ್ರಯಪತ್ರದಲ್ಲಿ ಅವರು ಮನೆ ನಂ. 504 ರಿಂದ 507 ಹಾಗೂ ದಾವಾ ಸರ್ವೆ ನಂಬರನಲ್ಲಿ 13 ಗುಂಟೆ ಐದುವರೆ ಆಣೆಯನ್ನು ಖರೀದಿ ಮಾಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು 2 ಸರ್ವೆ ನಂಬರಗಳು ಇದ್ದವು ಎನ್ನುವರು. ಕ್ರಯಪತ್ರದಲ್ಲಿ ಖರೀದಿಸಿದ ಎಲ್ಲಾ ಆಸ್ತಿಗಳ ಸಂಪೂರ್ಣ ಸ್ವಾಧೀನತೆ ಶೇಖ್ ಉಮರ ಬಳಿ ಇತ್ತು ಎಂದರೆ ಸರಿಯಲ್ಲ. ದಿನಾಂಕ 12-06-2008 ರ ಮೊದಲು ನನಗೆ ದಾವಾಸ್ತಿಯ ಬಗ್ಗೆ ಯಾವುದೇ ಸಂಬಂಧ ಇರಲಿಲ್ಲ ಎಂದರೆ ಸರಿ. ದಿನಾಂಕಃ 12-06-2008ರ ಪೂರ್ವದಲ್ಲಿ ದಾವಾಸ್ತಿಗೆ ಸಂಬಂಧಿಸಿ ಯಾವುದೆಲ್ಲಾ ಘಟನೆಗಳು ಸಂಭವಿಸಿವೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಹಾಗೂ ದಾಖಲೆಗಳನ್ನು ನೋಡಿ ಹೇಳುತ್ತಿದ್ದೇನೆ ಎಂದರೆ ಸರಿ. ನಾನು ಬರೆದುಕೊಂಡ ದಿನಾಂಕ 12-06-2008 ರ ಕ್ರಯದಸ್ತವೇಜು ನಂತರ ನನಗೆ ದಾವಾಸ್ತಿಗೆ ಸಂಬಂಧ ಬಂತು ಎಂದರೆ ಸರಿ. ದಾವಾಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ನಾನು ಮೂರ್ತಿ ನಾಯ್ಕ ವಕೀಲರ ಬಳಿ ಲೀಗಲ್ ಒಪಿನಿಯನ್ ಪಡೆದುಕೊಂಡಿದ್ದೆ. ಆ ಲೀಗಲ್ ಓಪಿನಿಯನ್ ಹಾಜರು ಮಾಡಲು ತೊಂದರೆ ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಅದರ ಅವಶ್ಯಕತೆ ಇಲ್ಲ ಎನ್ನುವರು. ನಾನು ಅಂತಹ ಯಾವುದೇ ಲೀಗಲ್ ಓಪಿನಿಯನ್ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. R.A. No. 29/1988 ಮತ್ತು R.A. No. 30/1988 ಅದರ ಬಗ್ಗೆ ನನಗೆ ಮಾಹಿತಿ ಇದೆ. ಆಸ್ತಿ ಖರೀದಿ ಮಾಡುವ ಮೊದಲೇ ಮಾಹಿತಿ ಇತ್ತು. ದಿನಾಂಕಃ 12-06-2008 ರಂದು ಮೊಹಮ್ಮದ್ ಉಮರ್ ಹಸನ್‌ರವರ ವಾರಿಸುದಾರರು ಎಂದರೆ ಈ ದಾವೆಯ 1 ರಿಂದ 6 ನೇ ವಾದಿಯರು ಹಾಗೂ ಮೊಹಮ್ಮದ್ ಅಬ್ದುಲ್

ಲತೀಫ್ ಇವರು ತಲಾ ಅರ್ಧ ಹಿಸ್ಸೆಗೆ ಮಾಲಿಕರು ಎಂದರೆ ಸರಿಯಲ್ಲ. ಮೂ.ದಾವಾ ನಂ. 70/1979 ಹಾಗೂ R.A. No. 29/1988 ಮತ್ತು R.A. No. 30/1988 ಆದೇಶಗಳ ಪ್ರಕಾರ ಮೊಹಮ್ಮದ್ ಉಮರ್ ಹಸನ್‌ರವರ ವಾರಿಸುದಾರರು ಎಂದರೆ ಈ ದಾವೆಯ 1 ರಿಂದ 6 ನೇ ವಾದಿಯರು ಹಾಗೂ ಮೊಹಮ್ಮದ್ ಅಬ್ದುಲ್ ಲತೀಫ್ ಇವರು ತಲಾ ಅರ್ಧ ಹಿಸ್ಸೆಗೆ ಮಾಲಿಕರು ಎಂದು ಘೋಷಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನ್ಯಾಯಾಲಯದ ಆದೇಶದಂತೆ ಸ್ವಾಧೀನತೆಯನ್ನು ಪಡೆಯಬೇಕೆಂಬ ಷರತ್ತು ಇತ್ತು ಎನ್ನುವರು. ಅದನ್ನು ಈ ತನಕ ಪಡೆದಿಲ್ಲ ಎನ್ನುವರು. R.A. No. 29/1988 ಮತ್ತು R.A. No. 30/1988 ರಲ್ಲಿ ಪ್ರಿಲಿಮಿನರಿ ಡಿಕ್ರಿಯಾಗಿತ್ತು ಎಂದರೆ ಇರಬಹುದು. ನನಗೆ R.A. No. 29/1988 ಮತ್ತು R.A. No. 30/1988 ಪ್ರಿಲಿಮಿನರಿ ಡಿಕ್ರಿ ಎಂದು ಖಚಿತ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಈ ದಾವೆಯು ಮೂ.ದಾವಾ ನಂ. 70/1979 ಹಾಗೂ R.A. No. 29/1988 ಮತ್ತು R.A. No. 30/1988 ಇದರ ಮುಂದುವರಿದ ಪ್ರತ್ಯೇಕ ಸ್ವಾಧೀನ ಪಡೆಯಲು ಹಾಕಿದ ದಾವೆ ಎಂದರೆ ಸರಿಯಲ್ಲ. ಮೂ.ದಾವಾ ನಂ. 70/1979 ಹಾಗೂ R.A. No. 29/1988 ಮತ್ತು R.A. No. 30/1988 ಇದರ Final Decree Proceeding ಈ ಪ್ರಸ್ತುತ ದಾವೆ ಆಗಿರುತ್ತದೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹಾಕುವಾಗ ಶೇಖ್ ಉಮರ ಹಸನ್ ಇವರ ವಾರಿಸುದಾರರಾಗಿರುವ ವಾದಿಯರು ದಾವಾಸ್ತಿಯ ಸ್ವಾಧೀನತೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ದಾವಾಸ್ತಿಯನ್ನು ಕಬಳಿಸಲು ನಾನು ದಿನಾಂಕ 12-06-2008 ರ ಭೋಗಸ್ ಕ್ರಯದಸ್ತವೇಜುಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಮೊಹಮ್ಮದ್ ಅಬ್ದುಲ್ ಲತಿಫ್ ಇವರಿಗೆ ದಾವಾಸ್ತಿಯಲ್ಲಿ ಅರ್ಧ ಹಕ್ಕು ಮಾತ್ರ ಇದ್ದು ಉಳಿದ ಅರ್ಧ ಹಿಸ್ಸೆಗೆ ಭೋಗಸ್ ಸೇಲ್ ಡೀಡ್ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಕ್ರಯದಸ್ತವೇಜು ಬರೆದುಕೊಟ್ಟವರಿಗೆ ಸಂಪೂರ್ಣ ಮಾಲಿಕತ್ವದ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಹಿಂದೆ ಯಾವುದೇ ವ್ಯಾಜ್ಯದಲ್ಲಿ ದಾವಾಸ್ತಿಯ ಬಗ್ಗೆ ಎಡವರ್ಸ ಪೊಸೆಶನ್ ಕ್ಲೇಮುಗಳ

ಬಗ್ಗೆ ನಾನಗಲೀ, 1 ನೇ ಪ್ರತಿವಾದಿಯಾಗಲೀ ನಾನು ಖರೀದಿ ಮಾಡಿದವರ ಪೂರ್ವಜರು ಆಗಲೀ ಎಡವರ್ಸ ಪೊಸೆಶನ್ ಕ್ಲೇಮ ಮಾಡಿಲ್ಲ ಎಂದರೆ ಸರಿಯಲ್ಲ. ಹಿಂದೆ ಎಡವರ್ಸ ಪೊಸೆಶನ್ ಕ್ಲೇಮ ಮಾಡಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಆ ದಾಖಲೆ ಹಾಜರು ಮಾಡಲು ಆಗುತ್ತದೆಯಾ ಎಂಬ ಪ್ರಶ್ನೆಗೆ ಸಾಕ್ಷಿ ಕೋರ್ಟಿನ ತೀರ್ಪೇ ದಾಖಲೆ ಎನ್ನುವರು. ಕೋರ್ಟ ತೀರ್ಪಿನ ಪ್ರಕಾರ ಶೇಖ್ ಉಮರ ಹಸನ್ ಹಾಗೂ ಅವರ ವಾರಿಸುದಾರರು ದಾವಾ ಸ್ವತ್ತಿನ ಜಂಟಿ ಸ್ವಾಧೀನತೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಹಿಂದೆ ನಡೆದ ಮೂ.ದಾವಾ ನಂ. 70/1979 ಹಾಗೂ R.A. No. 29/1988 ಮತ್ತು R.A. No. 30/1988 ರಲ್ಲಿ ಇದ್ದ ವಾದಿಗಳು ದಾವಾ ಆಸ್ತಿಯಲ್ಲಿ ಅನುಮತಿಯ ಮೇರೆಗೆ ಸ್ವಾಧೀನತೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ನಾನು ದಾವಾಸ್ತಿಯನ್ನು ಖರೀದಿ ಮಾಡುವಾಗ ಯಾವುದೇ ಪತ್ರಿಕೆ ಪ್ರಕಟಣೆ ಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ದಾವಾಸ್ತಿಯ ಬೊನೊಫೈಡ್ ಪರ್ಚೇಸರ್ ಅಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿರುವ ಮನೆ ನಂ. 507 ನ್ನು ಹೊರತುಪಡಿಸಿ ಉಳಿದೆಲ್ಲಾ ದಾವಾ ಮನೆಗಳು ಮತ್ತು ಆಸ್ತಿ ಶೇಖ್ ಉಮರ ಹಸನ್ ಇವರ ವಾರಿಸುದಾರರ ಸ್ವಾಧೀನತೆಯಲ್ಲಿ ಇತ್ತು ಎಂದರೆ ಸರಿಯಲ್ಲ. ಹಳೆ ಮನೆಗಳು ಬಿದ್ದು ಹೋಗಿವೆ ಎಂದರೆ ಸರಿಯಲ್ಲ. ಅಲ್ಲಿ ಮನೆಗಳೇ ಇರಲಿಲ್ಲ. ದಿನಾಂಕ 12-06-2008 ರಲ್ಲಿ ನನಗೆ ಕ್ರಯ ಪತ್ರ ಮಾಡಿಕೊಟ್ಟವರು ಯಾರೂ ದಾವಾಸ್ತಿಯಲ್ಲಿ ವಾಸಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಹಣದ ಅಧಿಕಾರದಿಂದ ಹಾಗೂ 2 ಬಾರಿ ಎಂ.ಎಲ್.ಎ. ಆಗಿದ್ದರಿಂದ ದಾವಾಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಕ್ರಯಪತ್ರ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ತೀರ್ಪನ್ನು ಹೊರತುಪಡಿಸಿ ನಾನು ಎಲ್ಲಾ ಅವಶ್ಯವಿರುವ ದಾಖಲೆಗಳನ್ನು ನೋಡಿಕೊಂಡು ದಾವಾಸ್ತಿ ಖರೀದಿ ಮಾಡಿರುತ್ತೇನೆ. ಆ ದಾಖಲೆಗಳಲ್ಲಿ ನನಗೆ ಮಾರಾಟ ಮಾಡಿದವರು ಎಡವರ್ಸ ಪೊಸೆಶನ್ ಮೂಲಕ

ಮಾಲಿಕರಾಗಿರುತ್ತಾರೆ ಎಂದು ಎಲ್ಲಿಯೂ ಬರೆದಿಲ್ಲ ಎಂದರೆ ಸರಿ. ಸಿವಿಲ್ ನ್ಯಾಯಾಲಯದ ತೀರ್ಪುಗಳ ಎದುರು ಉಳಿದೆಲ್ಲಾ ದಾಖಲೆಗಳು ಶೂನ್ಯ ಹಾಗೂ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಕಾರವಾರ